**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 86/2023 |
| ಸಿ.ಡಬ್ಲ್ಯೂ | 4 |
| ಪಿ.ಡಬ್ಲ್ಯೂ | 1 |

| | | |
|---|---|---|
| ಹೆಸರು | :- | ಗಿರಿಧರ ಕ್ಯಾತನ್ |
| ಗಂಡನ/ತಂದೆ ಹೆಸರು | :- | ಮುರಳಿಧರ |
| ವಯಸ್ಸು | :- | 45 ವರ್ಷ |
| ಉದ್ಯೋಗ | :- | ಮುಖ್ಯ ಪೇದೆ, ಲೋಕಾಪೂರ ಠಾಣೆ |
| ವಾಸಸ್ಥಳ | :- | ಲೋಕಾಪೂರ |

ಸಾಕ್ಷಿಯನ್ನು ದಿಃ 05.01.2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ ರವರಿಂದ**

1. 2017 ರಿಂದ ಇಲ್ಲಿಯವರೆಗೆ ನಾನು ಲೋಕಾಪೂರ ಠಾಣೆಯಲ್ಲಿ ನಾನು ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ27.09.2022 ರಂದು ಸಂಜೆ 6 ಗಂಟೆ ಸುಮಾರಿಗೆ ಚಾಸಾ-1 ರವರು ನಾನು ಲೋಕಾಪೂರದ ಗಸ್ತು ಕರ್ತವ್ಯದಲ್ಲಿ ಇದ್ದಾಗ ಒಬ್ಬ ವ್ಯಕ್ತಿ ಚಿಕ್ಕೂರ ಎಲ್.ಟಿ. ನಂ.2 ರ ಕ್ರಾಸ್ ಬಳಿ ರಸ್ತೆಯ ಪಕ್ಕ ಒಬ್ಬ ವ್ಯಕ್ತಿ ಅಕ್ರಮ ಸಾರಾಯಿ ಪಾಕೆಟಗಳನ್ನು ಮಾರಾಟ ಮಾಡುತ್ತಿದ್ದಾನೆ ಎಂದು ಮಾಹಿತಿ ಬಂದಿದ್ದು, ರೇಡ ಮಾಡಲು ಇಬ್ಬರು ಪಂಚರನ್ನು ಕರೆತರಲು ತಿಳಿಸಿದ್ದು, ಅದರಂತೆ ನಾನು ಚಾಸಾ-2 ಮತ್ತು 3 ರವರನ್ನು ಕರೆಯಿಸಿಕೊಂಡು ಬಂದು ಚಾಸಾ-1 ರವರು ಅವರಿಗೆ ರೇಡ ವಿಷಯ ತಿಳಿಸಿ ಅವರು ಒಪ್ಪಿಕೊಂಡ ಮೇರೆಗೆ ಠಾಣೆಯ ಜೀಪನಲ್ಲಿ ಸಾಯಂಕಾಲ 6-30 ಗಂಟೆಗೆ ಹೊರಟು ಮಾಹಿತಿ ಬಂದ ಸ್ಥಳದ ಹತ್ತಿರ ತಲುಪಿದಾಗ ಸಂಜೆ 6-45 ನಿಮಿಷ ಆಗಿತ್ತು. ಅಲ್ಲಿ ಮರೆಯಲ್ಲಿ ನಿಂತು ವಾಚ್ ಮಾಡಲಾಗಿ ಒಬ್ಬ ವ್ಯಕ್ತಿ ಕೈ ಚೀಲ ಹಿಡಿದುಕೊಂಡು ಸಾರಾಯಿ ಮಾರಾಟ ಮಾಡುತ್ತಿದಿದ್ದು ಕಂಡು ಬಂದಿತ್ತು. ನಾವು ಚಾಸಾ-1 ರವರು ಮತ್ತು ಪಂಚರೊಂದಿಗೆ ಹೋಗಿ ಆತನನ್ನು ಹಿಡಿದು ಆತನ ಹೆಸರು ವಿಚಾರಿಸಲಾಗಿ ಆತ ತನ್ನ ಹೆಸರು ಸಂತೋಷ ರಾಮಪ್ಪ ರಾಠೋಡ ಎಂದು ಸಾ-ಚಿಕ್ಕೂರ ಎಲ್.ಟಿ ನಂ.2 ಎಂದು ತಿಳಿಸಿದನು.

2. ಆತನ ಕೈಯಲ್ಲಿದ್ದ ಕೈಚೀಲವನ್ನು ತೆಗೆದು ನೋಡಲಾಗಿ ಅದರಲ್ಲಿ 180 ಎಮ್.ಎಲ್ ಅಳತೆಯ ಒರಿಜಿನಲ್ ಚಾಯ್ಸ ಡಿಲಕ್ಸ ವಿಸ್ಕಿಯ 17 ಪಾಕೆಟಗಳು ಇದ್ದವು. ಸದರಿ ವ್ಯಕ್ತಿ ಅಂಗ ಜಪ್ತಿ ಮಾಡಲಾಗಿ ಆತನ ಬಳಿ ರೂ.350/- ಗಳು ಸಿಕ್ಕವು. ಸದರಿ ಹಣ ಸಾರಾಯಿ ಮಾರಾಟದಿಂದ ಬಂದಿದೆ ಎಂದು ತಿಳಿಸಿದನು. ಸದರಿ ವಶಪಡಿಸಿಕೊಂಡ ಮುದ್ದೆ ಮಾಲುಗಳಿಂದ 2 ಪಾಕೆಟಗಳನ್ನು

ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದು ಉಳಿದ ಪಾಕೆಟಗಳನ್ನು ರಟ್ಟಿನ ಬಾಕ್ಸನಲ್ಲಿ ಹಾಕಿ ಕೈಚೀಲನ್ನು ಸಹ ಪುರಾವೆಗಾಗಿ ಜಪ್ತಿಪಡಿಸಿಕೊಂಡು, ಬಿಳಿ ದಾರದಿಂದ ಕಟ್ಟಿ ಸರಕಾರಿ ಸೀಲ್ ಹಾಕಿ ಪಂಚರ ಹಾಗೂ ಚಾಸಾ-1 ರವರ ಸಹಿ ಮಾಡಿದ ಚೀಟಿ ಅಂಟಿಸಲಾಯಿತು. ಪಂಚನಾಮೆಯನ್ನು ರಸ್ತೆಯ ಬಳಿ ಬೆಳಕಿನಲ್ಲಿ ಸಂಜೆ 7-10 ರಿಂದ 8-10 ರವರೆಗೆ ಬರೆಯಲಾಯಿತು. ಸಾಕ್ಷಿಗೆ ಈಗ 17 ಟೆಟ್ರಾ ಪಾಕೆಟಗಳನ್ನು ತೋರಿಸುತ್ತಿದ್ದು, ಅವುಗಳನ್ನು ಒಂದು ರಟ್ಟಿನ ಬಾಕ್ಸನಲ್ಲಿ ಇದ್ದು, ಸದರಿ ಟೆಟ್ರಾ ಪಾಕೆಟಗಳನ್ನು ಮುಮಾ-1 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು 17 ಟೆಟ್ರಾ ಪಾಕೆಟಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಲಾಯಿತು ಎಂದು ಹೇಳುತ್ತಾರೆ. ಕೈಚೀಲವನ್ನು ಗುರುತಿಸಿದ್ದು, ಅದನ್ನು ಮುಮಾ-2 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಗುರುತಿಸುತ್ತಾರೆ. ಆ ದಿನ ವಶಪಡಿಸಿಕೊಂಡ ರೂ.350/- ನೋಡಿದರೆ ಗುರುತಿಸುತ್ತೇನೆ. ಆರೋಪಿತನನ್ನು ವಶಪಡಿಸಿಕೊಂಡ ಮುದ್ದೆಮಾಲುಗಳೊಂದಿಗೆ ಠಾಣೆಗೆ ತೆಗೆದುಕೊಂಡು ಬರಲು ಅಗತ್ಯವಿದ್ದ ಸಹಾಯ ಮಾಡಿರುತ್ತೇನೆ.

**ಪಾಟೀ ಸವಾಲು : ಶ್ರೀ.ವಿ.ಕೆ.ಎಸ್ ವಕೀಲರಿಂದ ಆರೋಪಿ ಪರವಾಗಿ**

1. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಪಂಚರನ್ನು ಬರಮಾಡಿಕೊಂಡಲ್ಲ, ಘಟನಾ ಸ್ಥಳಕ್ಕೆ ಭೇಟಿ ನೀಡಿಲ್ಲ, ಯಾವುದೇ ರೇಡ ಮಾಡಿಲ್ಲ, ಆರೋಪಿತನಿಂದ ಯಾವುದೇ ಅಕ್ರಮ ಸಾರಾಯಿ ಮತ್ತು ನಗದನ್ನು ವಶಪಡಿಸಿಕೊಂಡಿಲ್ಲ, ರಾಸಾಯನಿಕ ಪರೀಕ್ಷೆಗಾಗಿ ಅಕ್ರಮ ಸಾರಾಯಿಯನ್ನು ಜಪ್ತು ಮಾಡಿಕೊಂಡಿಲ್ಲ, ಯಾವುದೇ ಪಂಚನಾಮೆಯನ್ನು ಸ್ಥಳದಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. ಮುಮಾ-1 ಮತ್ತು 2 ಕ್ಕೂ ಹಾಗೂ ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನಿಮ್ಮ ಮೇಲಾಧಿಕಾರಿ ಆಗಿದ್ದು, ಅವರ ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸರಿ ಇದೆ .

Sd/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ